**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.899/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಗಾಯಿತ್ರಿ | ಪ್ರಾಸಾ-6 |
| ಗಂಡನ ಹೆಸರು | : ಇ.ಎಸ್. ನಾಗರಾಜ್ | ಚಾಸಾ-11 |
| ವಯಸ್ಸು | : 50 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ. | ದಿನಾಂಕಃ 28.10.2025. |
| ವಾಸಸ್ಥಳ | : ಚಿಕ್ಕಮಗಳೂರು ಮಹಿಳಾ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.28.07.2021 ರಿಂದ ದಿ.03.11.2022 ರವರೆಗೂ ಬಣಕಲ್ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.24.01.2022 ರಂದು ಪ್ರಸ್ತುತ ಪ್ರಕರಣದ ಕಡತವನ್ನು ಚಾಸಾ-9 ರವರಿಂದೆ ಪಡೆದುಕೊಂಡು ಅದೇ ದಿನ ಆರೋಪಿಗಳನ್ನು ಜಾಮೀನಿನ ಮೇಲೆ ಬಿಡಬಾರದು ಎಂದು ನ್ಯಾಯಾಲಯಕ್ಕೆ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತೇನೆ. ದಿ.28.01.2022 ರಂದು ಕೃತ್ಯ ನಡೆದ ಸ್ಥಳವಾದ ಬಣಕಲ್ ಹೋಬಳಿ, ಬಕ್ಕೀ ಗ್ರಾಮದಲ್ಲಿರುವ ಸ.ನಂ.40 ರ ದಾಖಲಾತಿ ಹಾಗೂ ಇದರ ವಾರಸುದಾರರು ಯಾರು ಎಂಬುದರ ದಾಖಲಾತಿಯನ್ನು ಕೋರಿ ಚಾಸಾ-6 ರವರಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ದಿ.29.01.2022 ರಂದು ಕೃತ್ಯ ನಡೆದ ಸ್ಥಳದ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ಸದರಿ ಸಮಯದಲ್ಲಿ ಚಾಸಾ-1 ರವರು ಹಾಜರುಪಡಿಸಿದಂತಹ ಮುದ್ದೆ ಮಾಲುಗಳನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ಅದರಲ್ಲಿ 2 ಅಡಿ ಉದ್ದ ಇರುವ ಮರದ ಹಿಡಿ ಇರುವ 1 ಕಬ್ಬಿಣದ ಕತ್ತಿ, ಗುಲಾಬಿ ಬಣ್ಣದ ಚಿತ್ರವಿರುವ, ನೇರಳೆ ಬಣ್ಣದ ಒಂದು ನೈಟಿ ಅದು ಎದೆಯ ಭಾಗದಲ್ಲಿ ಮತ್ತು ಹೊಟ್ಟೆಯ ಭಾಗದಲ್ಲಿ ಹರಿದಿರುತ್ತದೆ. ನೀಲಿ ಬಣ್ಣದ ಬಿಳಿ ಚುಕ್ಕಿ ಇರುವ ಒಂದು ಅಂಗಿ, ಸದರಿ ಅಂಗಿಯಲಿ ಅಲ್ಲಲ್ಲಿ ರಕ್ತಸಿಕ್ತದ ಗುರುತು ಮತ್ತು ಎಡತೋಳಿನ ಭಾಗದಲ್ಲಿ ಸ್ವಲ್ಪ ಹರಿದಿರುತ್ತದೆ. ಹಸಿರು ಬಣ್ಣದ ಬಿಳಿ ವೃತ್ತ ಹಾಗು ಚುಕ್ಕಿಗಳಿರುವ, ರಕ್ತಸಿಕ್ತವಾಗಿರುವ ಒಂದು ಬಟ್ಟೆ. ಸದರಿ ಮಹಜರ್ ಕ್ರಮವನ್ನು 15.00 ರಿಂದ 17.00 ಗಂಟೆಯವರೆಗೂ ಜರುಗಿಸಿರುತ್ತೇನೆ. ಸದರಿ ಸಮಯದಲ್ಲಿ ಫೋಟೋವನ್ನು ತೆಗೆಯಲಾಗಿರುತ್ತದೆ.

ದಿ.02.02.2022 ರಂದು ಆರೋಪಿಗಳು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿರುತ್ತಾರೆ. ನ್ಯಾಯಾಲಯದ ಅದೇಶದಂದೆ ಸದರಿ ಆರೋಪಿಗಳನ್ನು ಬಿಡುಗಡೆ ಮಾಡಿರುತ್ತೇನೆ. ದಿ.10.02.2022 ರಂದು ಚಾಸಾ-1 ರವರ ಕಲಂ 164 ರಡಿಯಲ್ಲಿ ಅವರ ಹೇಳಿಕೆಯನ್ನು ದಾಖಲಿಸಿಕೊಡುವಂತೆ ನ್ಯಾಯಾಲಯಕ್ಕೆ ಮನವಿಯನ್ನು ನೀಡಿರುತ್ತೇವೆ. ದಿ.11.02.2022 ರಂದು ಚಾಸಾ-1 ರವರ ಕಲಂ 164 ರಡಿಯ ಹೇಳಿಕೆಯನ್ನು ನ್ಯಾಯಾಲಯದಿಂಂದ ಪಡೆದು, ಪ್ರಕರಣದ ಕಡತಕ್ಕೆ ಅಳವಡಿಸಿಕೊಳ್ಳಲಾಗಿರುತ್ತದೆ. ದಿ31.03.2022 ರಂದು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನೀಡಲು ಚಾಸಾ-8 ರವರಿಗೆ ಮನವಿ ಪತ್ರವನ್ನು ನೀಡಿರುತ್ತೇನೆ. ದಿ.01.05.2022 ರಂದು ಕೃತ್ಯ ನಡೆದ ಸ್ಥಳದ ಬಗ್ಗೆ ಚಾಸಾ-6 ರವರು ನೀಡಿದ ವರದಿಯನ್ನು ಮತ್ತು ಪಹಣಿಯನ್ನು ಪಡೆದುಕೊಂಡಿರುತ್ತೇನೆ.

ದಿ.08.06.2022 ರಂದು ಗ್ರಾಯದ ದೃಢೀಕರಣ ಪತ್ರವನ್ನು ಚಾಸಾ-8 ರವರಿಂದ ಪಡೆದುಕೊಂಡಿರುತ್ತೇನೆ. ದಿ.20.06.2022 ರಂದು ಚಾಸಾ-10 ರವರಿಂದ ಕಲಂ65 ಬಿ ರಡಿಯ ದೃಢೀಕೃತ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ದಿ.20.08.2022 ರಂದು ಚಾಸಾ-1 ರವರ ಹೇಳಿಕೆ, ದಿ.08.06.2022 ರಂದು ಚಾಸಾ-2 ಮತ್ತು 3 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಯ ವಿರುದ್ಧ ಆರೋಪವು ಸಾಬೀತಾದ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ರಿಂದ 5 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿರುತ್ತಾರೆ. ಸಾಕ್ಷಿಯು ದಿ.31.03.2022 ರಂದು ಚಾಸಾ-8 ರವರಿಗೆ ನೀಡಿದ ಮನವಿ ಪತ್ರ ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ ಮೇರೆಗೆ ಸದರಿ ಮನವಿ ಪತ್ರವನ್ನು ನಿಪಿ-9 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ದಿ.08.06.2022 ರಂದು ಚಾಸಾ-8 ರವರಿಂದ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿರುವ ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪ್ರಮಾಣ ಪತ್ರವನ್ನು ನಿಪಿ-10 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ದಿ.10.02.2022 ರಂದು ನ್ಯಾಯಾಲಯಕ್ಕೆ ನೀಡಿದ ಮನವಿ ಪ್ರತಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಮನವಿ ಪ್ರತಿಯನ್ನು ನಿಪಿ-11 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ದಿ.28.01.2022 ರಂದು ಚಾಸಾ-6 ರವರಿಗೆ ಬರೆದ ಮನವಿ ಪತ್ರವನ್ನು ಮತ್ತು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿ ಪತ್ರವನ್ನು ನಿಪಿ-12 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

ದಿ.01.05.2022 ರಂದು ಚಾಸಾ-6 ರವರು ಒಂದು ಪಹಣಿಯೊಟ್ಟಿಗೆ ನೀಡಿದ ವರದಿಯನ್ನು ಮತ್ತು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-13 ಮತ್ತು ಪಹಣಿಯನ್ನು ನಿಪಿ-14 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-7 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ರಿಂದ 4 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಬಿ.ಎ. ವಕೀಲರಿಂದಃ**

ನಾನು ಚಾಸಾ-8 ರವರಿಗೆ ಯಾವುದೇ ಮನವಿ ಪತ್ರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮೂಡಿಗೆರೆಯ ಆಸ್ಪತ್ರೆಯಲ್ಲಿ ಗಾಯಾಳುವಿನ ಹೇಳಿಕೆಯನ್ನು ಚಾಸಾ-9 ರವರು ಪಡೆದುಕೊಂಡಿರುತ್ತಾರೆ. ಆ ದಿನ ಚಾಸಾ-9 ರವರೇ ಠಾಣೆಯ SHO ಆಗಿ ಕರ್ತವ್ಯ

ನಿರ್ವಹಿಸಿರುತ್ತಾರೆ. ಸಾಮಾನ್ಯವಾಗಿ ಠಾಣಾ SHO ಹೊರಗೆ ಹೋಗಿದ್ದಲ್ಲಿ, ಬೇರೆಯವರಿಗೆ ಅವರ ಕೆಲಸವನ್ನು ವಹಿಸಿಹೋಗಬೇಕು ಎಂದರೆ ಸರಿ. ಆ ದಿನ ಚಾಸಾ-9 ರವರು ತಮ್ಮ ಕರ್ತವ್ಯವನ್ನು ಯಾರಿಗೆ ವಹಿಸಿದ್ದರು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಚಾಸಾ-8 ರವರಿಗೆ ನೀಡಿದ ಮನವಿ ಪತ್ರವನ್ನು ಅಂತಿಮ ವರದಿಯೊಟ್ಟಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-6 ರವರು ತಮ್ಮ ವರದಿಯೊಟ್ಟಿಗೆ ಲಗತ್ತಿಸಿದ ಪಹಣಿಯಲ್ಲಿ ಪ್ರತ್ಯೇಕವಾಗಿ ಯಾರ ಮಾಲೀಕತ್ವಕ್ಕೆ ಸದರಿ ಸ್ವತ್ತು ಸಂಬಂಧಿಸಿರುತ್ತದೆ ಎಂದು ನಮೂದಿಲ್ಲ ಎಂದರೆ ಸರಿ. ನಾನು ಮಹಜರ್ ಸಮಯಕ್ಕೆ ಘಟನಾ ಸ್ಥಳಕ್ಕೆ ಭೇಟಿ ನೀಡಿದ ಸಮಯದಲ್ಲಿ ಸದರಿ ಸ್ಥಳವು ಯಾರ ಮಾಲೀಕತ್ವಕ್ಕೆ ಸೇರಿದ್ದಾಗಿರುತ್ತದೆ ಎಂದು ನನಗೆ ತಿಳಿದುಬಂದಿರುವುದಿಲ್ಲ ಎಂದರೆ ಸರಿ. ಮಹಜರ್ ಸಮಯದಲ್ಲಿ ಘಟನಾ ಸ್ಥಳಕ್ಕೆ RI ಸರ್ವೇಯರ್ ಅಥವಾ VA ಅವರನ್ನು ಕರೆದುಕೊಂಡು ಹೋಗಲು ಪ್ರಯತ್ನಿಸಿರುವುದಿಲ್ಲ.

ಅದೇ ರೀತಿ ತನಿಖಾ ಸಮಯದಲ್ಲೂ ಅವರನ್ನು ಕರೆದುಕೊಂಡು ಹೋಗುವ ಪ್ರಯತ್ನ ಮಾಡಿರುವುದಿಲ್ಲ. ಘಟನಾ ಸ್ಥಳದ ಚೆಕ್ಕುಬಂದಿಯನ್ನು ಅಲ್ಲಿ ಹಾಜರಾಗಿದ್ದ ಪಂಚರು ಹೇಳಿರುತ್ತಾರೆ. ಆ ದಿನ ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ನಮ್ಮ ಸಿಬ್ಬಂಧಿಯು ತಯಾರಿಸಿರುತ್ತಾರೆ. ಸದರಿ ನಕಾಶೆಯಲ್ಲಿ ದಕ್ಷಿಣ, ಉತ್ತರ ಮತ್ತು ಪಶ್ಚಿಮ ದಿಕ್ಕಿಗೆ ಕಾಫೀ ತೋಟದೊಳಗಿನ ದಾರಿ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಅದೇ ರೀತಿ ಪೂರ್ವ ದಿಕ್ಕಿಗೆ ತಂತಿ ಬೇಲಿ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಚೆಕ್ಕುಬಂದಿಯನ್ನು ಮಹಜರ್ ನಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ. ಮಹಜರ್ ಪೂರ್ವದಲ್ಲಿ ಪಂಚರಿಗೆ ನೋಟೀಸನ್ನು ಜಾರಿ ಮಾಡಿರುತ್ತೇವೆ. ಸದರಿ ವಿಚಾರವನ್ನು ನಾವು ನಮ್ಮ ಮಹಜರ್ ನಲ್ಲಿ ತಿಳಿಸಿರುವುದಿಲ್ಲ. ನಾವು ವಶಕ್ಕೆ ಪಡೆದುಕೊಂಡ ಎಂ.ಒ.1 ನ್ನು ಅಳತೆಯನ್ನು ಮಾಡಲಾಗಿರುತ್ತದೆ. ಮಹಜರ್ ಕ್ರಮ ಜರುಗಿಸಿದ ನಂತರ ಮುಂದಿನ ತನಿಖೆಗಾಗಿ ಮತ್ತೊರ್ವ ಸಿಬ್ಬಂಧಿಗೆ ಕಡತವನ್ನು ಕೊಡಲು ಯಾವುದೇ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಪ್ರಸ್ತುತ ಪ್ರಕರಣವು ಕಲಂ 34 ರ KE Act ನ ಅಡಿಯಲ್ಲಿ ಸಂಬಂಧಿಸಿದ್ದಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಸ್ಥಳ ಮಹಜರ್ ಮಾಡುವ ಸಮಯದಲ್ಲಿ ಯಾವುದೇ ತಂತಿ ಬೇಲಿ ಹಾಳಾಗಿರುವುದಿಲ್ಲ.

ಘಟನಾ ಸ್ಥಳವು ಯಾರಿಗೆ ಸಂಬಂಧಿಸಿದ್ದಾಗಿರುತ್ತದೆ ಎಂಬುದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ. ಚಾಸಾ-1 ರವರಿಗೆ ಸ.ನಂ.40 ರ ಸ್ವತ್ತು ಯಾವ ರೀತಿ ಬಂದಿರುತ್ತದೆ ಎಂದು ನಾನು ಅವರ ಬಳಿ ಮೂಲ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ. ಆರೋಪಿಗಳು ಮತ್ತು ಚಾಸಾ-1 ರವರ ಮಧ್ಯೆ ಸಿವಿಲ್ ವ್ಯಾಜ್ಯವಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಘಟನ ನಡೆದ ದಿನ ಯಾರೊಟ್ಟಿಗೆ ಮೂಡಿಗೆರೆಯ ಆಸ್ಪತ್ರೆಗೆ ಹೋಗಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ಚಾಸಾ-1 ರವರು ಯಾವುದೇ ಆಸ್ಪತ್ರೆಗೆ ದಾಖಲಾಗಿರುವುದಿಲ್ಲ ಮತ್ತು ನಾನು ಅವರ ಹೇಳಿಕೆಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳ ಮಹಜರ್ ಕ್ರಮವನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ-8 ರವರಿಂದ ಯಾವುದೇ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಒತ್ತಡಕ್ಕೆ ಮಣಿದು ಸುಳ್ಳು ದೋ.ಪ.ಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತನಿಖೆಯಲ್ಲಿ

ಆರೋಪಿಗಳು ಯಾವುದೇ ಆಪಾದನೆ ಮಾಡಿಲ್ಲ ಎಂದು ತಿಳಿದು ಬಂದರೂ ಸುಳ್ಳು ದೋ.ಪ.ಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಚಾಸಾ-1 ರವರು ಒತ್ತಡಕ್ಕೆ ಮಣಿದು ಕಲಂ 164 ರಡಿಯಲ್ಲಿ ಅವರ ಹೇಳಿಕೆಯನ್ನು ಕೊಡಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ರಿಂದ 5 ನ್ನು ಚಾಸಾ-10 ರವರು ತೆಗೆದಿರುತ್ತಾರೆ. ಆ ದಿನ ನನ್ನೊಟ್ಟಿಗೆ ಇತರ ಮೂರು ಸಿಬ್ಬಂಧಿಗಳು ಸ್ಥಳ ಕ್ಕೆ ಹೋಗಿರುತ್ತೇವೆ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.